**ಕರ್ನಾಟಕ ವಿಧಾನಸಭೆ**
**ಹದಿನಾರನೇ ವಿಧಾನಸಭೆ**
**ಹತ್ತನೇ ಅಧಿವೇಶನ**

# ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ) (ತಿದ್ದುಪಡಿ) ವಿಧೇಯಕ, 2026

**(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–25)**

ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ) ಅಧಿನಿಯಮ, 1975ನ್ನು (1975ರ ಕರ್ನಾಟಕ ಅಧಿನಿಯಮ 23) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 5ರ ತಿದ್ದುಪಡಿ.-** ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ) ಅಧಿನಿಯಮ, 1975 (1975ರ ಕರ್ನಾಟಕ ಅಧಿನಿಯಮ 23)ರ 5ನೇ ಪ್ರಕರಣದಲ್ಲಿ,

(i) ಅಸ್ತಿತ್ವದಲ್ಲಿರುವ ಉಪಬಂಧಗಳಿಗೆ ಉಪ-ಪ್ರಕರಣ (1) ಎಂದು ಸಂಖ್ಯೆ ನೀಡತಕ್ಕದ್ದು; ಮತ್ತು

(ii) ಹಾಗೇ ಸಂಖ್ಯೆ ನೀಡಲಾದ ಉಪ-ಪ್ರಕರಣ (1)ರ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2) ಪ್ರಕರಣ 4ರಲ್ಲಿ ಏನೇ ಒಳಗೊಂಡಿದ್ದರೂ ಮತ್ತು ಉಪ-ಪ್ರಕರಣ (1)ರ ಉಪಬಂಧಗಳಿಗೆ ಬಾಧಕವಾಗದಂತೆ, ಈ ಪ್ರಕರಣದಡಿಯಲ್ಲಿ ರಚಿಸಲಾದ ಉನ್ನತ ಮಟ್ಟದ ಸಮಿತಿಯ ಶಿಫಾರಸ್ಸುಗಳ ಆಧಾರದ ಮೇಲೆ, ರಾಜ್ಯ ಸರ್ಕಾರವು, ಈ ಅಧಿನಿಯಮ ಅನ್ವಯವಾಗುವ ಉದ್ಯಾನವನ ಅಥವಾ ಉಪವನ ಒಳಗೊಂಡಿರುವ ಯಾವುದೇ ಭೂಮಿ ಅಥವಾ ಕಟ್ಟಡ ಅಥವಾ ಅದರ ಭಾಗಗಳ ಬಳಕೆಗೆ ಅನುಮತಿಸುವುದು ಸಾರ್ವಜನಿಕ ಹಿತಾಸಕ್ತಿಯಲ್ಲಿ ಯುಕ್ತವೆಂದು ಪರಿಗಣಿಸಿದರೆ, ಅದನ್ನು ಮಾರಾಟ, ಗುತ್ತಿಗೆ, ಉಡುಗೊರೆ, ವಿನಿಮಯ, ಅಡಮಾನ ಅಥವಾ ಅನ್ಯಥಾ ರೀತಿಯಲ್ಲಿ ಪರಭಾರೆ ಮಾಡಬಹುದು ಅಥವಾ ಅಂಥ ಉದ್ಯಾನವನದ ಒಟ್ಟು ಪ್ರದೇಶದ ಶೇಕಡ ಐದರಷ್ಟನ್ನು ಮೀರದ ಪ್ರದೇಶದವರೆಗೆ ರಾಜ್ಯ ಸರ್ಕಾರದ ಯಾವುದೇ ಇಲಾಖೆ, ಶಾಸನಬದ್ಧ ಪ್ರಾಧಿಕಾರ, ಸರ್ಕಾರಿ ಕಂಪನಿ ಅಥವಾ ಸ್ಥಳೀಯ ಪ್ರಾಧಿಕಾರದ ಪರವಾಗಿ ನಿರ್ಮಾಣ, ನಿರ್ವಹಣೆ, ವ್ಯವಸ್ಥಾಪನೆ, ಪರಿಸರ ಮತ್ತು ಜೀವಪರಿಸರದ ರಕ್ಷಣೆ

ಇತ್ಯಾದಿಗಳಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದ ಅಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು ಅಂಥ ಭೂಮಿ ಅಥವಾ ಕಟ್ಟಡ ಅಥವಾ ಅದರ ಭಾಗಗಳನ್ನು ಬಳಸಲು ಅನುಮತಿ ನೀಡಬಹುದು.

(3) ಸಾರ್ವಜನಿಕ ಮೂಲಸೌಕರ್ಯ ಅಥವಾ ಸಾರ್ವಜನಿಕ ಉಪಯುಕ್ತ ಯೋಜನೆಗಳ ಅನುಷ್ಠಾನಕ್ಕಾಗಿ ಉದ್ಯಾನವನ ಅಥವಾ ಉಪವನ ಒಳಗೊಂಡಿರುವ ಯಾವುದೇ ಭೂಮಿ ಅಥವಾ ಕಟ್ಟಡ ಅಥವಾ ಅದರ ಭಾಗಗಳ ಬಳಕೆಯನ್ನು ಸಾರ್ವಜನಿಕ ಹಿತಾಸಕ್ತಿಯ ಮುಂದುವರಿಕೆ ಎಂಬುದಾಗಿ ಪರಿಗಣಿಸತಕ್ಕದ್ದು.

(4) ರಾಜ್ಯ ಸರ್ಕಾರವು ಉಪ-ಪ್ರಕರಣ (2)ರಡಿಯಲ್ಲಿನ ಶಿಫಾರಸುಗಳನ್ನು ಮಾಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ಅಧಿಕಾರಿಯು ಮುಖ್ಯಸ್ಥರಾಗಿರುವ, ರಾಜ್ಯ ಸರ್ಕಾರವು ಸೂಕ್ತವೆಂದು ಪರಿಗಣಿಸಬಹುದಾದ ಅಂಥ ಸಂಖ್ಯೆಯ ಅಧಿಕಾರಿಗಳು ಮತ್ತು ಕ್ಷೇತ್ರ ಪರಿಣಿತರನ್ನು ಒಳಗೊಂಡ ಉನ್ನತ ಮಟ್ಟದ ಸಮಿತಿಯನ್ನು ರಚಿಸತಕ್ಕದ್ದು.

(5) ಉದ್ಯಾನವನ ಅಥವಾ ಉಪವನ ಒಳಗೊಂಡಿರುವ ಯಾವುದೇ ಭೂಮಿ ಅಥವಾ ಕಟ್ಟಡ ಅಥವಾ ಅದರ ಭಾಗಗಳ ಒಟ್ಟು ವಿಸ್ತೀರ್ಣದ ಶೇಕಡ ಐದರಷ್ಟು ಯಾವುದೇ ಪ್ರದೇಶವನ್ನು ಮಾರಾಟ, ಗುತ್ತಿಗೆ, ಉಡುಗೊರೆ, ವಿನಿಮಯ, ಅಡಮಾನ ಅಥವಾ ಅನ್ಯಥಾ ವಿಧಾನಗಳಿಂದ ಈಗಾಗಲೇ ಪರಭಾರೆ ಮಾಡಲಾಗಿದ್ದರೆ, ಅದನ್ನು ತೋಟಗಾರಿಕೆ ಇಲಾಖೆಯು ತೋಟಗಾರಿಕೆ ಅಭಿವೃದ್ಧಿ, ಅದರ ಸಂಬಂಧಿತ ಚಟುವಟಿಕೆಗಳು ಮತ್ತು ಆಡಳಿತಾತ್ಮಕ ಉದ್ದೇಶಗಳನ್ನು ಒಳಗೊಂಡಂತೆ ತನ್ನ ಸ್ವಂತ ಬಳಕೆಗಾಗಿ ಯಾವುದೇ ರಚನೆಯ ಉಪಯುಕ್ತತೆ ಅಥವಾ ಅಭಿವೃದ್ಧಿ  ಪರಿಣಾಮ ಬೀರುತ್ತದೆಂದು ಅರ್ಥೈಸಿಕೊಳ್ಳತಕ್ಕದ್ದಲ್ಲ.

(6) ಪ್ರಕರಣ 4ರಲ್ಲಿ ಏನೇ ಒಳಗೊಂಡಿದ್ದರೂ ಮತ್ತು ಈ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಉಪ-ಪ್ರಕರಣ (4)ರಡಿ ರಚಿಸಲಾದ ಉನ್ನತ ಮಟ್ಟದ ಸಮಿತಿಯ ಶಿಫಾರಸ್ಸುಗಳ ಆಧಾರದ ಮೇಲೆ, ಸಾರ್ವಜನಿಕ ಹಿತಾಸಕ್ತಿ ಮತ್ತು ಅವಶ್ಯಕತೆಯನ್ನು ತೋರುವ ದಾಖಲಿತ ಕಾರಣಗಳೊಂದಿಗೆ, ಈ ಅಧಿನಿಯಮ ಅನ್ವಯಿಸುವ ಯಾವುದೇ ತೋಟಗಾರಿಕೆ ಫಾರ್ಮ್ ಒಳಗೊಂಡಿರುವ ಯಾವುದೇ ಭೂಮಿ ಅಥವಾ ಕಟ್ಟಡ ಅಥವಾ ಅದರ ಭಾಗಗಳು ರಾಜ್ಯದ ಯಾವುದೇ ಪ್ರದೇಶದ ರೈತ ಸಮುದಾಯದ ಹಿತಾಸಕ್ತಿಗಾಗಿ, ಪ್ರಯೋಜನಕಾರಿ ಬಳಕೆಗೆ ಯುಕ್ತವೆಂದು ರಾಜ್ಯ ಸರ್ಕಾರವು ಪರಿಗಣಿಸಿದರೆ, ಅದು ಅಂಥ ಕನಿಷ್ಠ ವ್ಯಾಪ್ತಿಯ ಭೂಮಿ ಅಥವಾ ಕಟ್ಟಡ ಅಥವಾ ಅದರ ಭಾಗಗಳನ್ನು, ಯಾವುದೇ ತೋಟಗಾರಿಕೆ ಯೋಜನೆಯ ಅನುಷ್ಠಾನಕ್ಕಾಗಿ ಯಾವುದೇ ತೋಟಗಾರಿಕೆ ಫಾರ್ಮ್‌ನಲ್ಲಿ ತೋಟಗಾರಿಕೆ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ, ನಿರ್ಮಾಣ, ನಿರ್ವಹಣೆ, ವ್ಯವಸ್ಥಾಪನೆ, ಪರಿಸರ ಮತ್ತು ಜೀವಪರಿಸರದ ರಕ್ಷಣೆ ಮತ್ತು ಅದೇರೀತಿಯ ವಿಷಯಗಳಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದ ಅಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು ಪರಭಾರೆ ಮಾಡಬಹುದು ಅಥವಾ ಬಳಸಲು ಅನುಮತಿ ನೀಡಬಹುದು.

**ವಿವರಣೆ:-** ತೋಟಗಾರಿಕೆ ಯೋಜನೆ ಎಂದರೆ ತೋಟಗಾರಿಕೆ ಫಾರ್ಮ್‌ಗಳ ಅಭಿವೃದ್ಧಿ, ನರ್ಸರಿ, ಸುಧಾರಿತ ತಳಿಗಳ ಉತ್ಪಾದನೆ, ಕಟಾವಿನ ನಂತರದ ನಿರ್ವಹಣೆ, ಮೌಲ್ಯ ವರ್ಧನೆ, ತೋಟಗಾರಿಕೆ ಉತ್ಪನ್ನ ಆಧಾರಿತ ಕೈಗಾರಿಕೆಗಳು, ತೋಟಗಾರಿಕೆ ಉತ್ಪನ್ನಗಳ ಶೀತಲ ಸಂಗ್ರಹಣೆ, ಮಾರಾಟ ಮತ್ತು ಸಂಗ್ರಹಣೆ, ಶ್ರೇಣೀಕರಣ, ವಿಂಗಡಣೆ, ಪ್ಯಾಕಿಂಗ್ ಇತ್ಯಾದಿಗಳನ್ನು ಒಳಗೊಂಡ ಯೋಜನೆ ಮತ್ತು ತೋಟಗಾರಿಕೆಗೆ ನಿಕಟ ಸಂಬಂಧ ಹೊಂದಿರುವ ಇತರ ಚಟುವಟಿಕೆಗಳು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975 (1975ರ ಕರ್ನಾಟಕ ಅಧಿನಿಯಮ 23)ನ್ನು ಈ ಮುಂದಿನವುಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(ಎ) ಪ್ರಕರಣ 5ರಲ್ಲಿರುವ ನಿರ್ಬಂಧಗಳ ಹೊರತಾಗಿಯೂ, ರಾಜ್ಯ ಸರ್ಕಾರವು ಉದ್ಯಾನವನದ ಒಟ್ಟು ವಿಸ್ತೀರ್ಣದ ಗರಿಷ್ಠ ಶೇಕಡಾ ಐದರಷ್ಟು (5%) ಮಿತಿಯವರೆಗೆ, ಮಾರಾಟ, ಗುತ್ತಿಗೆ, ಉಡುಗೊರೆ, ವಿನಿಮಯ, ಅಡಮಾನ ಅಥವಾ ಅನ್ಯಥಾ ವಿಧಾನಗಳ ಮೂಲಕ ಉದ್ಯಾನವನದ ಭೂಮಿಯನ್ನು ಪರಭಾರೆ ಮಾಡುವುದಕ್ಕೆ ಸ್ಪಷ್ಟವಾಗಿ ಅನುಮತಿ ನೀಡುವುದು. ಇದು ಸಾರ್ವಜನಿಕ ಉಪಯುಕ್ತತೆಯ ಯೋಜನೆಗಳಿಗಾಗಿ ಸರ್ಕಾರಿ ಇಲಾಖೆಗಳು, ಶಾಸನಬದ್ಧ ಪ್ರಾಧಿಕಾರಗಳು, ಸರ್ಕಾರಿ ಕಂಪನಿಗಳು ಅಥವಾ ಸ್ಥಳೀಯ ಪ್ರಾಧಿಕಾರಗಳಿಗೆ ಮಾತ್ರ ಕಟ್ಟುನಿಟ್ಟಾಗಿ ಅನ್ವಯಿಸುತ್ತದೆ.

(ಬಿ) ರಾಜ್ಯ ಸರ್ಕಾರಕ್ಕೆ ಯಾವುದೇ ಶಿಫಾರಸ್ಸನ್ನು ಮಾಡುವ ಮೊದಲು, ಪ್ರಸ್ತಾವಿತ ಭೂ ಬಳಕೆಯ ಕುರಿತು ಕೂಲಂಕಷವಾಗಿ ಮೌಲ್ಯಮಾಪನ ಮಾಡುವುದನ್ನು ಖಚಿತಪಡಿಸಿಕೊಳ್ಳಲು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮುಖ್ಯಸ್ಥರಾಗಿರುವ ಹಾಗೂ ಗೊತ್ತುಪಡಿಸಿದ ಅಧಿಕಾರಿಗಳು ಮತ್ತು ಆಯಾ ಕ್ಷೇತ್ರ ಪರಿಣಿತರನ್ನು ಒಳಗೊಂಡ ಅಧಿಕೃತ ಮೌಲ್ಯಮಾಪನ ಕಾರ್ಯವ್ಯವಸ್ಥೆಯನ್ನು ಸ್ಥಾಪಿಸುವುದು.

(ಸಿ) ಶೇಕಡಾ ಐದರಷ್ಟು (5%) ಭೂ ವಿಸ್ತೀರ್ಣದ ಮಿತಿಯು ಈ ಹಿಂದೆ ಹಸ್ತಾಂತರಿಸಲಾದ ಎಲ್ಲಾ ಭೂಮಿಗಳನ್ನು ಕಡ್ಡಾಯವಾಗಿ ಒಳಗೊಂಡಿರುತ್ತದೆಂದು ಶಾಸನಬದ್ಧವಾಗಿ ನಿರ್ದಿಷ್ಟಪಡಿಸುವುದು ಮತ್ತು ಆ ಮೂಲಕ ಉಳಿದ ನೈಸರ್ಗಿಕ ಪರಿಸರ ವ್ಯವಸ್ಥೆಯನ್ನು ರಕ್ಷಿಸುವುದು. ತೋಟಗಾರಿಕೆ ಇಲಾಖೆಯು ತನ್ನದೇ ಆದ ಆಡಳಿತಾತ್ಮಕ ಮತ್ತು ಸಂಬಂಧಿತ ಬಳಕೆಗಾಗಿ ಕೈಗೊಳ್ಳುವ ಸಾಮಾನ್ಯ ಅಭಿವೃದ್ಧಿ ಕಾರ್ಯಗಳು ಈ ನಿರ್ಬಂಧದ ವ್ಯಾಪ್ತಿಗೆ ಬರುವುದಿಲ್ಲ ಎಂಬುದನ್ನು ಇದು ಮತ್ತಷ್ಟು ಸ್ಪಷ್ಟಪಡಿಸುವುದು.

(ಡಿ) ಪ್ರಮುಖ ತೋಟಗಾರಿಕೆ ಯೋಜನೆಗಳನ್ನು ಜಾರಿಗೆ ತರಲು ತೋಟಗಾರಿಕೆ ಫಾರ್ಮುಗಳ ಒಳಗಿನ ಅಲ್ಪ ಪ್ರಮಾಣದ ಪ್ರದೇಶಗಳನ್ನು ಬಳಸಿಕೊಳ್ಳಲು ವಿಶೇಷ ಕಾನೂನು ಅವಕಾಶವನ್ನು ಕಲ್ಪಿಸುವುದು. ಸಾರ್ವಜನಿಕ ಹಿತಾಸಕ್ತಿ ಮತ್ತು ಅಗತ್ಯತೆಯನ್ನು ಸಾಬೀತುಪಡಿಸುವ ದಾಖಲಿತ ಕಾರಣಗಳೊಂದಿಗೆ, ಇದು ಸಂಸ್ಕರಣೋತ್ತರ ಸೌಲಭ್ಯಗಳು, ಶೀತಲ ಸಂಗ್ರಹಣೆ ಘಟಕಗಳು, ಸುಧಾರಿತ ತಳಿಗಳ ಉತ್ಪಾದನೆ ಮತ್ತು ಸ್ಥಳೀಯ ರೈತ ಸಮುದಾಯಕ್ಕೆ ನೇರವಾಗಿ ಪ್ರಯೋಜನಕಾರಿಯಾಗುವ ಕೃಷಿ-ಆಧಾರಿತ ಕೈಗಾರಿಕೆಗಳನ್ನು ಒಳಗೊಂಡಿರುವುದು.

ಆದ್ದರಿಂದ, ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಪ್ರತ್ಯಾಯೋಜಿತ ಶಾಸನಾಧಿಕಾರದ ಕುರಿತು ಜ್ಞಾಪನ ಪತ್ರ**

| | |
|---|---|
| **ಖಂಡ- 2** | (ಎ) ಸೇರಿಸಲು ಉದ್ದೇಶಿಸಿರುವ 5ನೇ ಪ್ರಕರಣದ (2)ನೇ ಉಪ-ಪ್ರಕರಣವು, ಯಾವುದೇ ಭೂಮಿ, ಕಟ್ಟಡ ಅಥವಾ ಅದರ ಭಾಗಗಳ ಬಳಕೆಯನ್ನು ಅನುಮತಿಸುವ ಅಂಥ ಷರತ್ತುಗಳು ಮತ್ತು ನಿರ್ಬಂಧಗಳ ಕುರಿತು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br><br>(ಬಿ) ಸೇರಿಸಲು ಉದ್ದೇಶಿಸಿರುವ 5ನೇ ಪ್ರಕರಣದ (6)ನೇ ಉಪ-ಪ್ರಕರಣವು, ಯಾವುದೇ ಭೂಮಿ, ಕಟ್ಟಡ ಅಥವಾ ಅದರ ಭಾಗಗಳ ಕನಿಷ್ಠ ವ್ಯಾಪ್ತಿಯನ್ನು ಪರಭಾರೆ ಮಾಡುವ ಅಥವಾ ಅನುಮತಿಸುವ ಅಂಥ ಷರತ್ತುಗಳು ಮತ್ತು ನಿರ್ಬಂಧಗಳ ಕುರಿತು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನೆಯ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿರುತ್ತದೆ.

**ಎಸ್. ಎಸ್. ಮಲ್ಲಿಕಾರ್ಜುನ**
ಗಣಿ, ಭೂವಿಜ್ಞಾನ
ಮತ್ತು ತೋಟಗಾರಿಕೆ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**ಅನುಬಂಧ**

**ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975**

**(1975ರ ಕರ್ನಾಟಕ ಅಧಿನಿಯಮ 23)ರ ಉದ್ಧೃತ ಭಾಗ**

**XXX XXX XXX**

**5. ಕೆಲವೊಂದು ಪ್ರಕರಣಗಳಲ್ಲಿ ಅನುಮತಿ.-** 4ನೇ ಪ್ರಕರಣದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು ನಿರ್ಮಾಣ, ನಿರ್ವಹಣೆ, ವ್ಯವಸ್ಥಾಪನೆ, ಬಳಕೆ ಮತ್ತು ಅಂತಹುದೇ ಇತರ ಉದ್ದೇಶಗಳ ಸಂಬಂಧದಲ್ಲಿ ತಾನು ವಿಧಿಸಬಹುದಾದಂಥ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು.-

(ಎ) ಇಂದಿರಾ ಗಾಂಧಿ ಸಂಗೀತ ಕಾರಂಜಿ ಉದ್ಯಾನವನದಲ್ಲಿ 1223 ಚದರ ಮೀಟರುಗಳನ್ನು ರಸ್ತೆಗಳ ಅಗಲೀಕರಣದ ಉದ್ದೇಶಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ, ಮತ್ತು

(ಬಿ) ಲಾಲ್‌ಬಾಗ್ ಉದ್ಯಾನವನದ ಪಶ್ಚಿಮ ದ್ವಾರದ, ಪಶ್ಚಿಮ ಭಾಗದ ಕಡೆಗಿನ (ಪ್ರಸ್ತುತ ಆರ್.ವಿ. ರಸ್ತೆ ಎಂದು ಕರೆಯಲಾಗುತ್ತಿರುವ) ಕಾಂಪೌಂಡು ಗೋಡೆಯ ಉದ್ದಕ್ಕೂ 1135.18 ಚದರ ಮೀಟರುಗಳನ್ನು ಬೆಂಗಳೂರು ಮೆಟ್ರೋ ರೈಲು ಕಾರ್ಪೋರೇಷನ್ ಲಿಮಿಟೆಡ್‌ಗೆ ಬೆಂಗಳೂರಿನ ಮೆಟ್ರೊ ರೈಲು ಯೋಜನೆಯಲ್ಲಿ ಮೇಲು ನಿಲ್ದಾಣವನ್ನು ನಿರ್ಮಿಸುವ ಉದ್ದೇಶಕ್ಕಾಗಿ,

(ಸಿ) ವಿಧಾನಸೌಧ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ಮಧ್ಯದಲ್ಲಿರುವ, ಪೂರ್ವಕ್ಕೆ ಸರ್ವೆ ನಂ. 1284ರ ಉದ್ಯಾನವನದ ಪ್ರದೇಶ; ಪಶ್ಚಿಮಕ್ಕೆ ಸರ್ವೆ ನಂ. 570 ; ಉತ್ತರಕ್ಕೆ ನರ್ಸರಿಗೆ ಸಂಪರ್ಕ ಕಲ್ಪಿಸುವ ಸರ್ವೆ ನಂ. 1284ರ ಉದ್ಯಾನವನದ ಪ್ರದೇಶ ಮತ್ತು ದಕ್ಷಿಣಕ್ಕೆ ಉಚ್ಚ ನ್ಯಾಯಾಲಯದ ಮುಂಭಾಗದಲ್ಲಿರುವ ಉದ್ಯಾನವನದ ಪ್ರದೇಶ, ಈ ಮಧ್ಯದಲ್ಲಿರುವ ಕಬ್ಬನ್ ಉದ್ಯಾನವನದ 2126.71 ಚದರ ಮೀಟರ್‌ಗಳ ಪ್ರದೇಶ ;

(ಡಿ) ಪೂರ್ವಕ್ಕೆ ಸರ್ವೆ ನಂ. 1284ರಲ್ಲಿರುವ ಕರ್ನಾಟಕ ಉಚ್ಚ ನ್ಯಾಯಾಲಯ ; ಪಶ್ಚಿಮಕ್ಕೆ ಸರ್ವೆ ನಂ. 1284ರಲ್ಲಿರುವ ವಿಧಾನಸೌಧ ಮತ್ತು ಹೈಕೋರ್ಟ್ ಮಧ್ಯದಲ್ಲಿರುವ ಕಬ್ಬನ್ ಉದ್ಯಾನವನದ ಪ್ರದೇಶ ; ಉತ್ತರಕ್ಕೆ ಪ್ರಧಾನ ಅಂಚೆ ಕಛೇರಿ ಮತ್ತು ದಕ್ಷಿಣಕ್ಕೆ ಸರ್ವೆ ನಂ. 1284ರಲ್ಲಿಯ ಕಬ್ಬನ್ ಉದ್ಯಾನವನದ ಪ್ರದೇಶ ಈ ಮಧ್ಯದಲ್ಲಿರುವ ಕಬ್ಬನ್ ಉದ್ಯಾನವನದ 11,160 ಚದರ ಮೀಟರ್ ಗಳ ಪ್ರದೇಶ.

(ಇ) ಉಚ್ಚ ನ್ಯಾಯಾಲಯದ ವಕೀಲರು ಮತ್ತು ಸಂದರ್ಶಕರ ವಾಹನಗಳನ್ನು ನಿಲ್ಲಿಸುವುದಕ್ಕೆ, ಉಚ್ಚ ನ್ಯಾಯಾಲಯದ ಕಟ್ಟಡ ಮತ್ತು ಕೆಜಿಐಡಿಯ ಹಳೆಯ ಕಟ್ಟಡದ ನಡುವೆ 18028.35 ಚದರ ಮೀಟರುಗಳು, ಎಂದರೆ:-

ಪೂರ್ವ: ಕೆಜಿಐಡಿ ಕಟ್ಟಡ ಮತ್ತು ಉಚ್ಚ ನ್ಯಾಯಾಲಯ ಕಟ್ಟಡ ಭದ್ರತಾ ಬೇಲಿ 120.65 ಮೀಟರುಗಳು

ಪಶ್ಚಿಮ: ಅಂಬೇಡ್ಕರ್ ಬೀದಿ 170.68 ಮೀಟರುಗಳು

ಉತ್ತರ: ಕೆಜಿಐಡಿ ರಸ್ತೆಯಿಂದ ಅಂಬೇಡ್ಕರ್ ಬೀದಿ 137.27 ಮೀಟರುಗಳು

ದಕ್ಷಿಣ: ಉಚ್ಚ ನ್ಯಾಯಾಲಯ ಮತ್ತು ಅಂಬೇಡ್ಕರ್ ಬೀದಿಯಿಂದ ಉಚ್ಚನ್ಯಾಯಾಲಯ ಭದ್ರತಾ ಬೇಲಿಯ ಕಡೆಗೆ ಹೋಗುವ ರಸ್ತೆ 170.42 ಮೀಟರುಗಳು.

(ಎಫ್) ರಿಪೇರಿಗಳು ಮತ್ತು ಇತರ ಅಭಿವೃದ್ಧಿ ಇತರ ಅಭಿವೃದ್ಧಿ ಕಾಮಗಾರಿಗಳ ಉದ್ದೇಶಗಳಿಗಾಗಿ, ಈ ಕೆಳಗೆ ನಿರ್ದಿಷ್ಟಪಡಿಸಿದ ಸರಹದ್ದುಗಳೊಂದಿಗೆ ವಿಧಾನಸೌಧ, ವಿಕಾಸಸೌಧ ಮತ್ತು ಇತರ ನಿರ್ಮಿತಿಗಳ ಕಟ್ಟಡಗಳನ್ನು ಒಳಗೊಂಡ 49 ಎಕರೆಗಳು ಮತ್ತು 34 ಗುಂಟೆಗಳು (ಅಂದಾಜು),-

ಉತ್ತರ: ಶಾಸಕರ ಭವನ ವೃತ್ತದಿಂದ ಪ್ರಾರಂಭವಾಗಿ ರಸ್ತೆ ಉದ್ದಕ್ಕೂ ಮತ್ತು ವಾಹನ ನಿಲುಗಡೆ ಬಾಗಿಲಿನವರೆಗೆ ಕೊನೆಗೊಳ್ಳುವುದು.

ದಕ್ಷಿಣ: ಲೋಕಾಯುಕ್ತ ಕಚೇರಿಯಿಂದ ಪ್ರಾರಂಭವಾಗಿ ಗೋಪಾಲಗೌಡ ವೃತ್ತದಿಂದ ಪೊಲೀಸು ತಿಮ್ಮಯ್ಯ ವೃತ್ತವನ್ನು ಮುಟ್ಟುವ ವಿಧಾನವೀದಿ ರಸ್ತೆ.

ಪೂರ್ವ: ಶಾಸಕರ ಭವನ ವೃತ್ತದಿಂದ ಪ್ರಾರಂಭವಾಗಿ ರಾಜಭವನ ಗೋಡೆಯ ಸರಹದ್ದಿನುದ್ದಕ್ಕೂ ಮತ್ತು ಪೊಲೀಸು ತಿಮ್ಮಯ್ಯ ವೃತ್ತವನ್ನು ಮುಟ್ಟುವುದು.

ಪಶ್ಚಿಮ: ಲೋಕಾಯುಕ್ತ ಕಚೇರಿಯಿಂದ ಪ್ರಾರಂಭವಾಗಿ ಬಹುಮಹಡಿ ಕಟ್ಟಡದ ಗೋಡೆಯುದ್ದಕ್ಕೂ ಮತ್ತು ವಾಹನ ನಿಲುಗಡೆ ಬಾಗಿಲಿನಲ್ಲಿ ಕೊನೆಗೊಳ್ಳುವುದು,

- ಪರಭಾರೆ ಮಾಡಬಹುದು.

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 500, 22ನೇ ಆಗಸ್ಟ್ 2026

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**TENTH SESSION**

# THE KARNATAKA GOVERNMENT PARKS (PRESERVATION) (AMENDMENT) BILL, 2026

**(LA Bill No. 25 of 2026)**

A Bill further to amend the Karnataka Government Parks (Preservation) Act, 1975.

Whereas, it is expedient further to amend the Karnataka Government Parks (Preservation) Act, 1975 (Karnataka Act 23 of 1975), for the purposes hereinafter appearing;

Be it enacted by the Karnataka State Legislature in the seventy seventh year of the Republic of India, as follows:-

**1. Short title and commencement.-**(1) This Act may be called the Karnataka Government Parks (Preservation) (Amendment) Act, 2026.

(2) It shall come into force at once.

**2. Amendment of section 5.-** In the Karnataka Government Parks (Preservation) Act, 1975 (Karnataka Act 23 of 1975),in section 5,-

(i) the existing provision shall be numbered as sub-section (1); and

(ii) after sub-section (1) as so numbered, the following shall be inserted, namely:-

"(2) Notwithstanding anything contained in section 4 and without prejudice to the provisions of sub-section (1), on the basis of the recommendations of the High Level Committee constituted under this section, where the State Government considers it to be expedient in public interest to permit the utilization of any land or building or parts thereof comprised in a Park or Garden to which this Act applies, it may alienateby means of sale, lease, gift, exchange, mortgage or otherwise or permit the use of such land or building or parts thereof in favor of any Department of the State Government, Statutory Authority, Government Company or local authority up to an area not exceeding five percent of the total area of such park, subject to such

conditions and restrictionsas may be prescribedwith regards to construction, maintenance, management, protection of ecology and environment, etc.,

(3)The utilization of any land or building or parts thereof comprised in a Park or Garden for implementation of public infrastructure or publicutility projects shall be considered as being in furtherance of public interest.

(4) The State Government shall constitute a High Level Committee headed by an officer not below the rank of Additional Chief Secretary to Government along with such number of officers and domain experts as may be considered appropriate by the State Government to make recommendations under sub-section (2).

(5)Five percent of the total area of any land or building or parts thereof comprised in a Park or Garden shall be inclusive of any area, which is already alienated by means of sale, lease, gift, exchange, mortgage or otherwise. This shall not be construed as affecting the utility or development of any structure by the Horticulture Department for their own use including development of Horticulture, its allied activities and administrative purposes.

(6) Notwithstanding anything contained in section 4 and without prejudice to the provisions of this section, on the basis of the recommendations of the High Level Committee constituted under sub-section (4), with recorded reasons demonstrating public interest and necessity where the State Government considers it to be expedient as to the beneficial utilization of any land or building or parts thereof comprised in any Horticulture Farm to which this Act applies, in the interest of the farming community in any area of the State, it may alienate or permit the use of such minimum extent of land or building or parts thereof in necessary for implementation of Horticulture project in any Horticulture Farm for implementation of any Horticulture Project, subject to suchconditions as and restrictions as may be prescribed with regards construction, maintenance, management, protection of ecology and environment and like matters etc.,.

**Explanation:-** The Horticulture Project shall mean project involving development of Farm, Nursery, Production of improved varieties, post harvest management, value addition, horticulture produce based industries, cold storage, sales and storage, grading, sorting, packing etc., of horticulture produce and such other activities closely related to horticulture.

## STATEMENT OF OBJECTS AND REASONS

It is considered necessary further to amend the Karnataka Government Parks (Preservation) Act, 1975 (Karnataka Act 23 of 1975) to,-

(a) explicitly permit the State Government, notwithstanding restrictions in section 5, to alienate park land by way of sale, lease, gift, exchange, mortgage, or otherwise, up to an absolute limit of five percent (5%) of the total area. This applies strictly in favor of Government Departments, Statutory Authorities, Government Companies, or Local Authorities for public utility projects.

(b) establish an authoritative evaluation mechanism headed by the Additional Chief Secretary to Government, alongside designated officers and expert domain professionals, ensuring that any proposed land utilization is thoroughly evaluated before any recommendation is made to the State Government.

(c) statutorily mandate that the five percent (5%) spatial ceiling is strictly inclusive of any and all lands previously alienated, thereby safeguarding the remaining natural ecosystem. It further clarifies that standard developments by the Horticulture Department for its own administrative and allied use fall entirely outside this restriction.

(d) provide a specialized legal pathway for utilizing minimal areas within Horticulture Farms for implementing core Horticulture Projects. This includes post-processing facilities, cold storage units, production of improved varieties, and agro-based industries directly beneficial to the local farming community, backed by recorded reasons demonstrating public interest and absolute necessity.

Hence, the Bill.

## FINANCIAL MEMORANDUM

There is no extra expenditure involved in the proposed Legislative measure.

**MEMORANDUM REGARDING DELIGATED LEGISLATION**

| | | |
|---|---|---|
| Clause 2 | (a) | sub-section (2) of section 5 proposed to inserted empowers the State Government to prescribe by rules such conditions and restrictions to permit utilization of any land or building or parts thereof. |
| | (b) | sub-section (6) of section 5 proposed to inserted empowers the State Government to prescribe by rules such conditions and restrictions to alienate or permit use of such minimum extent of land or building or parts thereof. |

**S. S. MALLIKARJUN**
Minister for Mines, Geology and Horticulture

**M.K. VISHALAKSHI**
Secretary
Karnataka Legislative Assembly

**ANNEXURE**

**EXTRACT FROM THE KARNATAKA GOVERNMENT PARKS (PRESERVATION) ACT, 1975 (KARNATAKA ACT 23 OF 1975)**

**XXX XXX XXX**

5. Permission in certain cases.-Notwithstanding anything contained in section 4, the State Government may subject to such conditions and restrictions as it may impose as regards construction, maintenance, management use and like matters alienate an area of,-

(a) 1223 sq. mtrs at Indira Gandhi Musical Fountain Park to the Bruhat Bangalore Mahanagara Palike for the purpose of widening of roads; and

(b) 1135. 18 sq. mtrs at Lalbagh gardens along the compound wall of west gate towards western side of the park (presently called R.V. Road) to Bangalore Metro Rail Corporation Limited for the purpose of construction of elevated Station for Metro Rail Project of Bangalore"

(c) 2126.71 sq.mtrs area of Cubbon Park located between Vidhana Soudha and Karnataka High Court Building, East: Park area of survey No. 1284; West: Survey No. 570; North: Park area in survey No. 1284 linking to the nursery and South: Park area of survey No. 1284 opposite to High Court;

(d) 11,160 sq. mtrs area of Cubbon Park located between East: High Court of Karnataka in survey No. 1284; West: Existing Road between Vidhana Soudha, and High Court in the Cubbon Park area of survey No. 1284; North: General Post Office and South: Cubbon Park area of survey No. 1284.

(e) 18028.35 Square meters between High Court Building and Old KGID Building surrounded by,-

East: K.G.I.D. Building and High Court Building Security fence 120.65 meters.

West: Ambedhakar Veedhi 170.68 meters.

North: K.G.I.D. road to Ambedhakar Veedhi. 137.27 meters.

South: High Court Building and Road leading from Ambedhakar Veedhi to High Court Building Security fence 170.42 meters. to park the Vehicles of High Court Advocates and visitors.

(f) 49 acres and 34 guntas (approximately) consisting of the buildings of Vidhana Soudha, Vikasa Soudha and other structures with the boundaries specified hereunder for the purposes of repairs and other developmental works,-

North: Starting from Legislature House circle, running along the road and ending upto car parking gate.

South: Vidhana Veedhi road starting from Lokayuktha office running along Gopala Gowda circle touching Police Timmaiah circle.

East: Starting from Legislature circle, running along boundary wall of Rajbhavan and touching Police Timmaiah circle.

West: Starting from Lokayukta office running along M.S. Building compound and ending at Parking gate.

**XXX** **XXX** **XXX**

Govt. Press, Vikasa Soudha, Bengaluru, 22nd August, 2026, P7, W.D. , Copies 500